

ವಲ್ಕಾನ್ ಎಂಬ ಅಗ್ನಿದೇವತೆಗೆ ಕರುಣೆ ಬಂತು. ಒಡನೆಯೇ ಕೆಸಡಾಲಿಯನ್ ಎಂಬ ಸೇವಕನನ್ನು ಕರೆಸಿ, 'ನೀನು ಅಂಧನಾಗಿರುವ ಓರಿಯನ್‌ನ ಹೆಗಲ ಮೇಲೆ ಕೂತು ಮಾರ್ಗದರ್ಶನ ಮಾಡು' ಎಂದು ವಲ್ಕಾನ್ ಸೂಚಿಸಿದ. ಅವನ ಅಣತಿಯ ಮೇರೆಗೆ ಓರಿಯನ್‌ನ ಹೆಗಲ ಮೇಲೆ ಕೂತು ಮುಂದೆ ಸಾಗುವಲ್ಲಿ ನೆರವಾದ ಎಂಬ ಉಲ್ಲಾಸದಾಯಕ ಕಥೆ ಇದೆ. ಇಲ್ಲಿ ಕೆಸಡಾಲಿಯನ್ ಹೆಳವನಲ್ಲ, ಓರಿಯನ್‌ನ ಹೆಗಲ ಮೇಲೆ ಕುಳಿತವನು. ಆದರೆ ಅಡಿಗರ ಕಾವ್ಯ ಸೃಷ್ಟಿಯಲ್ಲಿ – 'ಹೆಳವನ ಹೆಗಲ ಮೇಲೆ ಕುರುಡ ಕೂತಿದ್ದಾನೆ' ಎಂಬ ರೂಪಕವಿದೆ. ಹೋಮರ್‌ನ ಮಹಾಕಾವ್ಯದಲ್ಲಿ ಬರುವ ಪ್ರಸಂಗಕ್ಕಿಂತ ಅಡಿಗರ ಈ ರೂಪಕ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿದೆ.

## ನರಿಯ ಬಾಯಲ್ಲಿ 'ವಸುದೈವ ಕುಟುಂಬಕಂ'

'ವಸುದೈವ ಕುಟುಂಬಕಂ' ಎನ್ನುವ ನುಡಿಗಟ್ಟನ್ನು ಯಾರು ಯಾರಿಗೆ ಹೇಳಿದರು ಎಂದು ಮೂಲ ಹುಡುಕಲು ನೋಡಿದರೆ, ಇನ್ನೇನೋ ಗೊಂದಲ ಎದುರಾಗುತ್ತದೆ. ಇಡೀ ಭೂಮಿಯೇ ಒಂದು ಕುಟುಂಬದ ಹಾಗೆ ಎನ್ನುವುದು ಇದರ ಧ್ವನಿತಾರ್ಥ ಮತ್ತು ಭಾವಾರ್ಥ ಎರಡೂ. ಈಗಂತೂ ರಾಜಕಾರಣಿಗಳು ಇದನ್ನು ಹೆಚ್ಚು ಹೆಚ್ಚು ಬಳಸುತ್ತಿದ್ದಾರೆ. ಇಡೀ ಭೂಮಿಯೇ ಒಂದು ಕುಟುಂಬ, ನಾವೆಲ್ಲ ಅದರ ಸದಸ್ಯರು ಎಂಬ ಅರ್ಥದಲ್ಲಿ. ಇದನ್ನು ಮೆಚ್ಚಬೇಕಾದ್ದೇ. ಬಹುಶಃ ಗಾಂಧೀಜಿಯವರ ಅಹಿಂಸಾ ತತ್ತ್ವಕ್ಕೆ ಇದು ಚೆನ್ನಾಗಿ ಒಪ್ಪುತ್ತದೆ. ಕುವೆಂಪು ಅವರ ವಿಶ್ವಮಾನವ ಪರಿಕಲ್ಪನೆಗೂ ಸೊಗಸಾಗಿ ಹೊಂದುತ್ತದೆ.

'ಹಿತೋಪದೇಶ' ಎಂಬ ನೀತಿ ಸಾರುವ ಕೃತಿಯಲ್ಲಿ 'ವಸುದೈವ ಕುಟುಂಬಕಂ' ಮಾತು ಬರುತ್ತದೆ. ಹಿತೋಪದೇಶ ಕೃತಿಯ ಕರ್ತೃ ತಾನು ಪಂಚತಂತ್ರ ಬರೆದ ಕರ್ತೃವಿಗೆ ಋಣಿಯಾಗಿರುವುದಾಗಿ ಹೇಳಿದ್ದಾನೆ. 'ಪಂಚತಂತ್ರ' ಕ್ರಿ.ಶ. ಮೂರನೇ ಶತಮಾನಕ್ಕೆ ಸೇರಿದ ಕೃತಿ ಎಂಬ ಬಗ್ಗೆ ಹೆಚ್ಚೇನೂ ಭಿನ್ನಾಭಿಪ್ರಾಯಗಳಿಲ್ಲ. ಹಿತೋಪದೇಶ, ಪಂಚತಂತ್ರದ ನಂತರ ಬಂದ ಕೃತಿ ಎನ್ನುವುದಂತೂ ಸ್ಪಷ್ಟ. ಪಂಚತಂತ್ರದಂತೆ ಹಿತೋಪದೇಶದಲ್ಲೂ ಪ್ರಾಣಿಗಳು–ಪಕ್ಷಿಗಳ ಮಾತಿನ ಮೂಲಕವೇ ಲೋಕನೀತಿ ಹೇಳುವ ತಂತ್ರಗಾರಿಕೆ ಇದೆ. ಆದರೆ ಇದರ ಕಾಲದ ಬಗ್ಗೆ ಗೊಂದಲವಿದೆ. ಬಹುಶಃ ಒಂಬತ್ತರಿಂದ ಹನ್ನೊಂದನೇ ಶತಮಾನವೆಂದು ಪಂಡಿತರ ಲೆಕ್ಕಾಚಾರ.

'ಹಿತೋಪದೇಶ' ಕಥೆಯೊಳಗೆ ಕಥೆ ಹೇಳುವ ತಂತ್ರಗಾರಿಕೆ ಅನುಸರಿಸಿದೆ. ನಾರಾಯಣ ಪಂಡಿತ ಎಂಬುವನು ಇದರ ಕರ್ತೃ; ಮಗಧ ಅಥವಾ ಬಂಗಾಳದಲ್ಲಿ ರಾಜವಂಶದ ಮಕ್ಕಳಿಗೆ ನೀತಿಪಾಠ ಹೇಳಿಕೊಡಲು ಕಥೆಯೊಳಗಿನ ಕಥೆಯನ್ನು ಆತ ಬೆಳೆಸಿದ ಎಂಬುದು ಪಂಡಿತರ ಒಂದು ವರ್ಗದ ಊಹೆ. ಇದರಲ್ಲಿ ನಾಲ್ಕು ಅಧ್ಯಾಯಗಳಿವೆ. ಮೊದಲ ಅಧ್ಯಾಯದಲ್ಲೇ 'ವಸುದೈವ ಕುಟುಂಬಕಂ' ಎಂಬ ಹೇಳಿಕೆ ಕಾಣಿಸಿಕೊಳ್ಳುತ್ತದೆ. ಈ ಅಧ್ಯಾಯದ ಹೆಸರು 'ಮಿತ್ರಲಾಭ'. ಇದನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ:

ಹಿರಣ್ಯಕ ಎಂಬ ಇಲಿ, ಅದರ ಮಿತ್ರ ಲಗುಪತನಕ ಎಂಬ ಕಾಗೆಗೆ, ಇನ್ನೊಂದು ಕಾಗೆಯಾದ ಸುಬುದ್ಧಿ, ಚಿತ್ರಾಂಗ ಎಂಬ ಜಿಂಕೆ, ಕ್ಷುದ್ರಬುದ್ಧಿ ಎಂಬ ನರಿಯ ಕಥೆ ಹೇಳುತ್ತದೆ. ಮಗಧ ರಾಜ್ಯದ ಚಂಪಕಾರಣ್ಯದಲ್ಲಿ ಈ ಮೂರೂ ಪ್ರಾಣಿಗಳು ವಾಸವಾಗಿದ್ದವು. ಕ್ಷುದ್ರಬುದ್ಧಿ ಕಾಡಲ್ಲಿ ಹೋಗುವಾಗ ಹತ್ತಿರದಲ್ಲೇ, ಸುಪುಷ್ಟವಾಗಿ ಬೆಳೆದ ಜಿಂಕೆಯನ್ನು ಕಂಡೊಡನೆ ಅದನ್ನು ಹೇಗಾದರೂ ಮಾಡಿ ಅಪಹರಿಸಿ ತಿನ್ನಬೇಕೆಂಬ ಆಸೆಯಾಯಿತು. ಜಿಂಕೆ ಬೇಗ ತಪ್ಪಿಸಿಕೊಂಡು ಹೋಗುತ್ತದೆ ಎಂಬುದನ್ನು ತಿಳಿದಿದ್ದ ಕ್ಷುದ್ರಬುದ್ಧಿ ಉಪಾಯಮಾಡಿ ಅದರ ನಂಬಿಕೆಗೆ ಪಾತ್ರವಾಗಬೇಕೆಂದು ಯೋಚಿಸಿತು. ಜಿಂಕೆಯ ಬಳಿ ಹೋಗಿ ವಿನಮ್ರವಾಗಿ ಕೈಮುಗಿದು ತನ್ನನ್ನು ತಾನು ಪರಿಚಯ ಮಾಡಿಕೊಂಡು, ತಾನು ಒಂಟಿಯಾಗಿರುವುದಾಗಿಯೂ ನಿನ್ನೊಡನೆ ಸ್ನೇಹಮಾಡಿಕೊಂಡು ಒಟ್ಟಿಗೇ ಇರಬೇಕೆಂದು ತನ್ನ ಇಚ್ಛೆಯೆಂದು ಹೇಳಿತು. ಕ್ಷುದ್ರಬುದ್ಧಿಯ ಕುಟಿಲೋಪಾಯ ತಿಳಿಯದೆ ಅದು ತಾನಿರುವ ಜಾಗಕ್ಕೆ ಕರೆದೊಯ್ದಿತು. ಮಾರ್ಗದಲ್ಲಿ ನರಿ ಮತ್ತು ಜಿಂಕೆ ಒಟ್ಟಿಗೇ ಬರುತ್ತಿರುವುದನ್ನು ನೋಡಿ ಕಾಗೆಗೆ ಗಾಬರಿಯಾಯಿತು. 'ಹೇ ಜಿಂಕೆ, ನಿನ್ನ ಜೊತೆ ಬರುತ್ತಿರುವ ಇನ್ನೊಂದು ಪ್ರಾಣಿ ಯಾವುದು? ಅದರ ಬಗ್ಗೆ ನಿನಗೆ ತಿಳಿದಿದೆಯೆ?' ಎಂದು ಕೇಳಿತು. ಜಿಂಕೆ ಖುಷಿಪಟ್ಟು 'ಈ ಅರಣ್ಯದಲ್ಲಿ ಇದು ನನ್ನ ಹೊಸ ಮಿತ್ರ' ಎಂದು ನರಿಯ ಬಗ್ಗೆ ಹೇಳಿತು. ಆಗ ಕಾಗೆ 'ಅಪರಿಚಿತರನ್ನು ಅಷ್ಟು ಬೇಗ ಸ್ನೇಹಿತರನ್ನಾಗಿ ಮಾಡಿಕೊಳ್ಳಬಾರದು, ಅದು ಅಪಾಯಕ್ಕೆ ಎಡೆಗೊಡುತ್ತದೆ' ಎಂದು ಎಚ್ಚರಿಕೆ ಕೊಟ್ಟಿತು. ಆದರೆ ಜಿಂಕೆ ಅದನ್ನು ಲಘುವಾಗಿ ಪರಿಗಣಿಸಿತು. ನರಿ ತುಂಬ ಸ್ನೇಹಮಯಿ ಎಂದು ಕೊಂಡಾಡಿತು. ಅಲ್ಲಿಯವರೆಗೂ ಸುಮ್ಮನಿದ್ದ ನರಿ ಉಪದೇಶ ಹೇಳುವಾಗ ಬಳಸಿದ್ದು 'ವಸುದೈವ ಕುಟುಂಬಕಂ' ಎನ್ನುವ ಮಾತನ್ನು.

**ಪರೋಪಕಾರಾಯ ಪುಣ್ಯಾಯ ಪಾಪಾಯ**
**ಪರಪೀಡನಾ ಉದಾರ ಚರಿತಾನಾಂತು**
**ವಸುದೈವ ಕುಟುಂಬಕಂ**